ಶ್ರೀ ವಾಟಾಳ್ ನಾಗರಾಜ್ : ಯಾರಾದರೂ ಕಂಬ ತೆಗೆಸಿ ತಂತಿ ತೆಗೆಸಿ ಎಂದು ಹೇಳಿದ್ದಾರಾ ನೀವು ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಶ್ರೀ ಜೆ. ಹೆಚ್. ಪಟೇಲ್ : ತಾವೇನು ಸಲಹೆ ಕೊಟ್ಟಿರಿ, ಯಾವ ರೈತನ ಬಾವಿಯಲ್ಲಿ ನೀರು ಇಲ್ಲ ಅವನು ಎಲೆಕ್ಟ್ರಿಸಿಟಿ ಬಳಸದೇ ಇದ್ದರೆ ಅವರಿಗೆ ಬಿಲ್ ಹೇಗೆ ಹೋಗುತ್ತದೆ? ಒಂದು ವೇಳೆ ಆ ರೀತಿ ಹೋಗಿದ್ದರೆ ಅದನ್ನು ಚೆಕ್ ಮಾಡಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅದೇ 67 ಕೋಟಿ ಬಾಕಿ ಇರುವುದನ್ನು ರದ್ದು ಮಾಡಿಸಿರುವುದಕ್ಕೆ ಪ್ರಯತ್ನ ಮಾಡಿ ಈ ಮಾಹಿತಿಯನ್ನು ತಮಗೆ ಕಳುಹಿಸಿ ಕೊಡುತ್ತೇನೆ.

Mr. Speaker : Alright, we will move on to the next question

ವಿಷಯ : ಅನಧಿಕೃತ ಪಂಪ್‌ಸೆಟ್ ವಿದ್ಯುದ್ದೀಕರಣಗಳನ್ನು ಸಕ್ರಮಗೊಳಿಸುವುದು.

251 (2083)-ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

1) ರಾಜ್ಯದಲ್ಲಿ ಇಲ್ಲಿಯವರೆಗೆ ಅನಧಿಕೃತ ಪಂಪ್‌ಸೆಟ್ ವಿದ್ಯುದ್ದೀಕರಣಗಳ ಬಗ್ಗೆ ಸಕ್ರಮಗೊಂಡಿರುವ ಸಂಖ್ಯೆ ಎಷ್ಟು ? ಹಾಗೂ ಸಕ್ರಮಗೊಳ್ಳಲು ಇರುವ ಅನಧಿಕೃತ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು ?

2) ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ಸರ್ಕಾರವು ಮತ್ತೇನಾದರೂ ಕಾಲಾವಕಾಶ ಕೊಡುತ್ತಿದೆಯೇ ಮತ್ತು ನಿಯಮಾವಳಿಗಳಲ್ಲಿ ಸಡಿಲತೆಯ ಅವಕಾಶಗಳಿವೆಯೇ?

3) ಪ್ರವರ್ಗ ನಾಲ್ಕಕ್ಕೂ ಮತ್ತು ಇತರ ಪ್ರವರ್ಗಗಳಲ್ಲಿ ಬರುವ ಅನಧಿಕೃತ ಪಂಪು ಸೆಟ್ಟುಗಳಿಗೆ ಸರ್ಕಾರಕ್ಕೆ ತಗಲಿರುವ ಮತ್ತು ತಗಲಿದ ವೆಚ್ಚದಲ್ಲಿ ಏನಾದರೂ ವ್ಯತ್ಯಾಸವಿದೆಯಾ? (ವ್ಯತ್ಯಾಸವಿದ್ದರೆ ವೆಚ್ಚ ಹಾಗೂ ಕಾನೂನಿನ ವ್ಯತ್ಯಾಸವನ್ನು ಒದಗಿಸುವುದು)

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

1) ಸಕ್ರಮಗೊಳಿಸಲ್ಪಟ್ಟ ಅನಧಿಕೃತ ಪಂಪುಸೆಟ್ಟುಗಳ ಸಂಖ್ಯೆ-17, 809 ಸಕ್ರಮಗೊಳಿಸಲು ಬಾಕಿ ಉಳಿದ ಅನಧಿಕೃತ ಪಂಪುಸೆಟ್ಟುಗಳ ಸಂಖ್ಯೆ -18.960.

2) ಇಲ್ಲ

3) ಪ್ರವರ್ಗ 4 - ಹಾಗೂ ಇತರ ಪ್ರವರ್ಗ (1, 2, 3) ಗಳಲ್ಲಿ ಬರುವ ಅನಧಿಕೃತ ಪಂಪುಸೆಟ್ಟುಗಳಿಗೆ ತಗಲುವ ವೆಚ್ಚದಲ್ಲಿ ವ್ಯತ್ಯಾಸವಿದೆ.

ಪ್ರವರ್ಗ 4 ರಲ್ಲಿ ಬರುವ ಅನಧಿಕೃತ ಪಂಪುಸೆಟ್ಟುಗಳ ವಿದ್ಯುದೀಕರಣಗೊಳ್ಳಲು ಕೇವಲ ಸರ್ವಿಸ್ ಮೈಯನ್ ಅವಶ್ಯಕವಿದ್ದು ಮಂಡಳಿಯ ವಿತರಣೆ ಮಾರ್ಗದ ವಿಸ್ತರಣೆಯ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಮಂಡಳಿಯು ಸಾಮಗ್ರಿಗಳ ಅವಶ್ಯಕತೆ ಇರುವುದಿಲ್ಲ.

ANNE

DETAILS OF DEFFERENCES PERTAINING

SL. NO.	DETAILS	CATEGORY-1
1.	Submition of application	Application already Submitted
2.	Payment of Deposits	Deposits paid
3.	Sanction of Power	Power Sanctioned
4.	Assiging of work order	Work order assigned
5.	Issual of the materials for the works partly/ fully	Issued the materials is partly/fully
6.	Availing of supply.	Availed the supply un-authorisedly.
7.	Pay of cost by the Un-authorised I.P.Set consumers for regulari sation.	a) - b) Rs. 300/- per HP c) MSD - Rs. 960/-

Note :

a) Lumpsum Payment.

b) Deposit per HP Connected.

c) MSD - Meter Security Deposit

XURE - I

TO DIFFERENT CATEGORIES OF I. P. SETS.

CATEGORY-2	CATEGORY-3	CATEGORY-4
Application already Submitted	Application not Submitted.	Application already submitted.
Deposits Paid	Deposits not Paid	Deposits Paid
Power Sanctioned	Power not sanctioned	Power sanctioned.
work order assigned	Work order not assigned.	Work order assigned.
No materials issued	No materials issued	Question does not arise since only service mains.
Availed the supply Un-authorisedly.	Availed the supply Un-authorisedly.	Availed the supply Un-authorisedly.
a) Rs. 5000 - others Rs. 2500 - SC/ST b) Rs. 300/- per HP c) MSD-Rs 960/-	a) 10000-Others b) 5000 - SC/ST b) Rs.300/- Per HP c) MSD-Rs.960/-	a) Rs. 2500-others Rs. 1250-SC ST b) Rs. 300/- per HP c) MSD-Rs. 960/-

ಶ್ರೀ ಬಿ. ಶಿವರಾಮು : ರಾಜ್ಯದಲ್ಲಿ ಒಟ್ಟು 36769 ಅನಧಿಕೃತ ಪಂಪ್‌ಸೆಟ್‌ಗಳು ಇದೆ ಎಂದು ಹೇಳುವುದರ ಮೂಲಕ 17,809 ಅನ್ನು ಸಕ್ರಮಗೊಳಿಸಿದ್ದೇವೆಂದು ಹೇಳಿದ್ದಾರೆ. ಇನ್ನು 18960 ಅನಧಿಕೃತ ಪಂಪ್‌ಸೆಟ್‌ಗಳು ಇವೆ ಎಂದು ಹೇಳಿದ್ದಾರೆ. ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಸರಕಾರವು ಮತ್ತೇನಾದರೂ ಕಾಲಾವಕಾಶ ಕೊಡುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ತಾವು ಈ ಬಾವಿಗಳನ್ನು ಏನು ಮಾಡುತ್ತೀರಿ ? 18, 960 ಭಾವಿಗಳು ಸಕ್ರಮವಾಗದೇ ಉಳಿದಿದೆ ಇದು ತಾವು ಕೊಟ್ಟಿರತಕ್ಕಂತಹ 1-2-3-4- ಈ ಯಾವ ಕೇಟಗರಿಯಲ್ಲಿ ಹೆಚ್ಚು ಬರುತ್ತದೆ ಎಂಬುದನ್ನು ತಿಳಿಸಬೇಕು. ಸರ್ವೀಸ್ ಮೈನ್‌ಗೂ ಬೇರೆಯದಕ್ಕೂ ತಗಲುವ ವೆಚ್ಚದ ಬಗ್ಗೆ ಪ್ರಶ್ನೆ ಕೇಳಿದ್ದೆ. ಆದರೆ ತಾವು ಬರೀ ಮಾಹಿತಿ ತಿಳಿಸಿದ್ದೀರಿ. ವಿತರಣೆ ಮಾರ್ಗದ ವಿಸ್ತರಣೆ ಸರ್ವೀಸ್ ಮೈನ್‌ಗೆ ಅವಶ್ಯಕತೆ ಇರುವುದಿಲ್ಲವೆಂದು ತಾವು ಹೇಳಿದ್ದೀರಿ. ಬೇರೆಯದಕ್ಕೆ ಸಾಮಗ್ರಿಗಳ ಅವಶ್ಯಕತೆ ಇರುತ್ತದೆ ಎಂದು ಇದೆ. ಆದರೆ ಇದಕ್ಕೆ ಎಷ್ಟು ವೆಚ್ಚ ತಗಲುತ್ತದೆ ಎಂಬ ಬಗ್ಗೆ ತಮ್ಮಲ್ಲಿ ಮಾಹಿತಿ ಇಲ್ಲವೇ? ತಾವೇ ಕೊಟ್ಟಿರುವ ಹಾಗೆ ಸ್ವಯಂ ಆರ್ಥಿಕ ನೆರವಿನಲ್ಲಿ ನೀರಾವರಿ ಪಂಪ್‌ಸೆಟ್ ಬಳಕೆದಾರರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ತಗಲುವ ಪೂರ್ಣ ಅಂದಾಜು ವೆಚ್ಚ ಅಥವಾ 10,000 ಇವೆರಡರಲ್ಲಿ ಯಾವುದು ಹೆಚ್ಚು ಅಂದರೆ ಕನಿಷ್ಠ 10,000 ರೂಪಾಯಿ ಬೀಳುತ್ತದೆ ಎಂದು ಇಲ್ಲಿ ಇದೆ. ಸರ್ವೀಸ್ ಮೈನ್ ಅನ್ನು ಹೊರತು ಪಡಿಸಿ 1 ಕಂಬ ಆಗಲೀ 2,5 ಕಂಬ ಆಗಲೀ ಇಷ್ಟು ವೆಚ್ಚ ಬೀಳುತ್ತದೆ. ಇದಕ್ಕೋಸ್ಕರ ತಗಲುವ ವೆಚ್ಚ ಎಷ್ಟು ಯಾವ ಕೇಟಗರಿಯಲ್ಲಿ ಇದು ಬರುತ್ತದೆಂದು ಕೇಳಿದ್ದೇನೆ. ಸರ್ವೀಸ್ ಮೈನ್‌ಗೂ ಈ ಕೇಟಗರಿಯಲ್ಲಿ ಬರತಕ್ಕಂಥದ್ದಕ್ಕೂ ವ್ಯತ್ಯಾಸ ಏನು ?

ಶ್ರೀ ಶರಣಬಸಪ್ಪ ದರ್ಶನಾಪುರ : ಅನಧಿಕೃತ ಪಂಪ್‌ಸೆಟ್‌ಗಳು ಈ ರಾಜ್ಯದಲ್ಲಿ 36,000 ಮೇಲೆ ಇದೆ ಎಂದು ನಮಗೆ ಮಾಹಿತಿ ಬಂದಿತ್ತು. ಅದರಲ್ಲಿ17809 ಪಂಪ್‌ಸೆಟ್‌ಗಳನ್ನು ರೆಗ್ಯುಲರೈಸ್ ಮಾಡಿದ್ದೇವೆ. ಹೋದ ವಿಧಾನಸಭಾ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಕೇಳಿದ ಹಾಗೆ ಒಂದು ತಿಂಗಳು ಅದಕ್ಕೆ ಎಕ್ಸ್‌ಟೆನ್‌ಷನ್ ಕೂಡ ಕೊಟ್ಟಿದ್ದೇವೆ. ಆ ಎಕ್ಸ್‌ಟೆನ್‌ಷನ್ ಕೊಟ್ಟ ಮೇಲೆ ಇಲ್ಲಿಯವರೆಗೆ 17809 ಪಂಪ್‌ಸೆಟ್‌ಗಳನ್ನು ನಾವು ಅಧಿಕೃತರೆಂದುಪರಿಗಣಿಸಿ ಅದಕ್ಕೆ ಕನ್‌ಕ್ಷನ್ ಕೊಟ್ಟಿದ್ದೇವೆ. ಇನ್ನು 15-16 ಸಾವಿರ ಪಂಪ್‌ಸೆಟ್ಟುಗಳು ಇವೆ. ನಾವು ನೋಟೀಸ್ ಕೊಟ್ಟರೂ ಕೂಡ ಯಾರೂ ಬಂದು ನಮಗೆ ಹಣ ತುಂಬಿಲ್ಲ ಏನೂ ಮಾಡಿಲ್ಲ. ಈಗ ಎಕ್ಸ್‌ಟೆನ್‌ಷನ್ ಕೊಡುವ ಸಮಯ ಬರುವುದಿಲ್ಲ. ನಾವು ನೇರವಾಗಿ ಅವರಿಗೆ ಕಟ್ ಮಾಡಬೇಕಾಗುತ್ತದೆ. ನಾವು ಅವರಿಗೆ 4ತಿಂಗಳು ಸಮಯ ಕೊಟ್ಟಿದ್ದೇವೆ. ಆದರೂ ಕೂಡ ಹಣ ತುಂಬಿಲ್ಲ. ನಮ್ಮ ಅಧಿಕಾರಿಗಳು ಕೂಡ ಅವರಿಗೆ

ಹೋಗಿ ಹೇಳಿದ್ದಾರೆ ಆದರೂ ಕೂಡ ಹಣ ತುಂಬಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಇದಕ್ಕೆ 4 ಕೇಟಗರಿ ಮಾಡಿದ್ದೇವೆ. ಯಾವ್ಯಾವ ಕೇಟಗರಿಗೆ ಏನೇನು ವೆಚ್ಚ ಬರುತ್ತದೆಂದುಕೂಡ ಹೇಳಿದ್ದೇವೆ. ಕೇಟಗರಿ 1ರಲ್ಲಿ ಅರ್ಜಿಯನ್ನು ಈಗಾಗಲೇ ಸಲ್ಲಿಸಿರಬೇಕು ಡಿಪಾಸಿಟ್ ತುಂಬಿರಬೇಕು ಪವರ್ ಮಂಜೂರಾಗಿರಬೇಕು ವರ್ಕ್ ಆರ್ಡರ್ ಕೂಡ ಆಗಿರಬೇಕು ಅವರಿಗೆ ಸ್ವಲ್ಪ ಮೆಟೀರಿಯಲ್ ಕೊಟ್ಟಿದ್ದರೆ ಅವರಿಗೆ ನಾವುಯಾವ ದಂಡ ಕೂಡ ವಿಧಿಸುವುದಿಲ್ಲ. ಪ್ರತಿ ಹೆಚ್‌ಪಿಗೆ 300 ರೂಪಾಯಿಗಳಂತೆ ಹಣ ತೆಗೆದುಕೊಂಡು ಕನೆಕ್ಷನ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಕೇಟಗರಿ 2-3 ರಲ್ಲಿ ಅರ್ಜಿ ಕೊಟ್ಟಿದ್ದಾರೆ. ಡಿಪಾಸಿಟ್ ತುಂಬಿಲ್ಲ ಪವರ್ ಮಂಜೂರಾತಿ ಆಗಿಲ್ಲ ವರ್ಕ್ ಆರ್ಡರ ಆಗಿಲ್ಲ. ಯಾವ ಮೆಟೀರಿಯಲ್ ಕೂಡ ಕೊಟ್ಟಿಲ್ಲ ಇಂತಹವರಿಗೆನಾವುಕೇಟಗರಿ 2 ರಲ್ಲಿ 500 ರೂ ಜನರಲ್‌ನವರಿಗೆ ತೆಗೆದುಕೊಂಡು ಎಸ್.ಸಿ.ಎನ್. ಟಿ. ಯವರಿಗೆ 250 ರೂ ಮಾಡಿದ್ದೇವೆ. ಕೇಟಗರಿ 3 ರಲ್ಲಿ 10,000 ರೂ ಮಾಡಿದ್ದೇವೆ. ಕೇಟಗರಿ 4 ರಲ್ಲಿ ಬರೀ ಸರ್ವೀಸ್ ಲೈನ್ ಎಳೆಯುವುದು. 10 ಫೀಟ್ 1 ಫೀಟ್ ಇರಬಹುದು 50-15 ಫೀಟ್ ಇರಬಹುದು. ಇಂತಹವಕ್ಕೆ ನಿಗದಿತ ರೇಟ್ ಕೊಡುವುದಕ್ಕಾಗುವುದಿಲ್ಲ ಒಂದುಸಲ ಸಾವಿರ ಆಗಬಹುದು 500-2000 ಆಗಬಹುದು. It depends upon the length of the well from the last pole. ಅದಕ್ಕೆ ನಿಗದಿತವಾದ ಬೆಲೆಯನ್ನು ಕೊಡುವುದಕ್ಕಾಗುವುದಿಲ್ಲ. ಈ ಕೇಟಗರಿಯಲ್ಲಿ ಬರತಕ್ಕಂಥದ್ದನ್ನು ನಾವು ರೆಗ್ಯೂಲರೈಸ್ ಮಾಡಿದ್ದೇವೆ. ಸಾಕಷ್ಟು ಸಮಯವನ್ನು ಕೂಡ ಅವರಿಗೆ ಕೊಟ್ಟಿದ್ದೇವೆ. ಆದರೂ ಕೂಡ ಅವರ್‍ಯಾರು ಹಣ ತುಂಬಿಲ್ಲ.

ಶ್ರೀ ಬಿ. ಶಿವರಾಮು : ಸರ್ವೀಸ್ ಮೇನ್‌ಗ್ ಕೆಇಬಿಗೆ ಏನೂ ವೆಚ್ಚ ತಗುಲುವುದಿಲ್ಲ. ಅದಕ್ಕೆ 2500 ರೂಪಾಯಿ ಇದೆ. ಕೇಟಗರಿ 2-3 ರಲ್ಲಿ ರೈತರಿಗೆ ಸ್ವಯಂ ಆರ್ಥಿಕ ನೆರವಿನ ಯೋಜನೆಯಲ್ಲಿ ಕೊಡತಕ್ಕಂಥಾದ್ದಕ್ಕೆ 1-2 ಕಂಬ ಇದ್ದರು ಕನಿಷ್ಠ 10000 ಕೊಡಿ ಎಂದು ಹೇಳುತ್ತಾರೆ. ರೈತ ತಾನೇ ಕಂಬಗಳನ್ನು ಹಾಕಿಕೊಂಡಿದ್ದಾನೆ. 1-2-3-5 ಕಂಬಗಳನ್ನು ಅವನೇ ಪೂರ್ಣಗೊಳಿಸಿಕೊಂಡಿದ್ದಾನೆ. ಇವರು ಸರ್ವೀಸ್ ಮೇನ್‌ಗೆ ಏನು ಮಾಡುತ್ತಾರೋ ಅದೇ ಕೆಲಸವನ್ನು ಅಲ್ಲಿ ಮಾಡುತ್ತಾರೆ. ಬರೀ ವೈರ್ ತಗುಲಿ ಹಾಕುವಂತಹ ಅಷ್ಟೇ ಕೆಲಸವನ್ನು ಈ ಕೆಇಬಿ ಯವರು ಮಾಡುತ್ತಾರೆ. ರೈತರು ಈಗಾಗಲೇ 10-15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಮಾಡಿದ್ದಾರೆ ಅದನ್ನು ಸರ್ವೀಸ್ ಮೈನ್ ಎಂದು ಟ್ರೀಟ್ ಮಾಡಿ ಇವರಿಗೆ ಸರ್ವೀಸ್ ಕೊಡುವುದಕ್ಕೆ ಏನು ತೊಂದರೆ? ಅದನ್ನು ರಿಲ್ಯಾಕ್ಸ್ ಮಾಡದೇ ಇರುವ ಕಾರಣಕ್ಕೋಸ್ಕರ ತೊಂದರೆಯಾಗಿದೆ. ಕೇಟಗರಿ 2-3 ರಲ್ಲಿ ರೈತರು ಕ್ರಮಕ್ಕೋಸ್ಕರ ಹಣವನ್ನು ತುಂಬತಕ್ಕಂತಹ ಕೆಲಸ ಮಾಡಿಲ್ಲ. ಇದು ರಿಲ್ಯಾಕ್ಸ್‌ಆಗಬೇಕು. ಇದರಲ್ಲಿ ಆರ್ಥಿಕವಾಗಿ

ದುರ್ಬಲರಾದಂತಹವರು ಮತ್ತು ಎಸ್.ಸಿ.ಎಸ್.ಟಿ ವರ್ಗದವರು ಹೆಚ್ಚು ಇದ್ದಾರೆ. ಸಣ್ಣ ಹಿಡುವಳಿದಾರರು ಇದ್ದಾರೆ. ಅದನ್ನು ಕೇಟಗರೈಸ್ ಮಾಡತಕ್ಕಂತಹ ಕೆಲಸ ಮಾಡಲಿಲ್ಲ. 17,000 ಪ್ರಗತಿ ಎಂದು ಹೇಳುತ್ತಿದ್ದಾರೆ. ಏನೂ ದಂಡ ಕೇಟಗರಿ1 ರಲ್ಲಿ ಇಲ್ಲವೆಂದು ಹೇಳಿದರು ಇದು ಸರ್ವೀಸ್ ಮೈನ್ 2500 ರೂ ಕಟ್ಟತಕ್ಕಂಥದ್ದಕ್ಕೆ ಮಾತ್ರ ವ್ಯತ್ಯಾಸ ಇಲ್ಲವೆಂಬುದನ್ನು ಅವರು ಸಾಬೀತು ಮಾಡಿಕೊಂಡು ಅದನ್ನು ರಿಲ್ಯಾಕ್ಸ್ ಮಾಡಿ. 2500 ರೂ ಒಳಗೆ ತನಕ. ಏಕೆಂದರೆ ರೈತರೇ ಪಂಪ್‌ಸೆಟ್ ಎಲ್ಲವನ್ನೂ ಹಾಕಿಕೊಂಡಿರುವುದಿಲ್ಲ. ಇದರಲ್ಲಿ ದುರ್ಬಲ ವರ್ಗದವರು ಇದ್ದಾರೆ. ಟೈಮ್ ಎಕ್ಸ್‌ಟೆನ್‌ಷನ್ ಅನ್ನು ಸರಕಾರ ಪ್ರಕಟಣೆ ಮಾಡದೇ ಹೋದರೆ, ರೈತರ ಬಗ್ಗೆ ಸರಕಾರಕ್ಕೆ ಹೆಚ್ಚು ಕಳಕಳಿ ಇಲ್ಲವೆಂದು ತಿಳಿಯುತ್ತದೆ. ರೈತರ ಬಗ್ಗೆ ಸರಕಾರಕ್ಕೆ ಹೆಚ್ಚು ಕಳಕಳಿ ಇದೆ ಎಂದು ಹೇಳಿ ಈ ಕೆಲಸ ಮಾಡದೇಹೋದರೆ ಸರಕಾರ ರೈತರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನೂಸಾಕಷ್ಟು ಪಂಪ್‌ಸೆಟ್‌ಗಳು ರೆಗ್ಯೂಲರೈಸ್ ಆಗಬೇಕಾಗಿದೆ. ಆದರೆ ಕೆಲವು ಪಂಪ್ ಸೆಟ್‌ಗಳ ಓನರ್ಸ್ ಕೆ.ಇ.ಬಿ ಸಬ್ ಡಿವಿಜನ್ ಕಚೇರಿಗೆ ಬಂದು ನಾವು ಹಣ ತುಂಬುತ್ತೇವೆಂದು ಬಂದರೆ ಅವರಿಂದ ಹಣ ತಂಬಿಸಿಕೊಂಡು ಅವರಿಗೆ ರೆಗ್ಯುಲರೈಸ್ ಮಾಡುತ್ತೇವೆ? ಇಲ್ಲದಿದ್ದರೆ ಅನಿವಾರ್ಯವಾಗಿ ನಮ್ಮ ಪವರ್ ಕಳ್ಳತನವಾಗುತ್ತದೆ. ಸರ್ಕಾರ ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಈಗ ಎಲ್ಲಿಯವರೆಗೆ ಸಮಯವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವುದು, 4-6 ತಿಂಗಳಾಯಿತು ಅವರು ಯಾರೂ ಬರದಿದ್ದರೆ ಸರ್ಕಾರ ಏನು ಮಾಡಬೇಕು? ಮಾನ್ಯ ಸದಸ್ಯರು ಅದರ ಬಗ್ಗೆ ಅರಿತು ಕೊಳ್ಳಬೇಕು 18 ಸಾವಿರ ಪಂಪ್‌ಸೆಟ್ ಓನರ್ಸ್ ಏನು ಇದ್ದಾರೆ ರೆಗ್ಯೂಲರೈಸ್ ಆಗಿಲ್ಲದವರು, ಅಂಥವರು ಇಮ್ಮಡಿಯೇಟಾಗಿ ಬಂದು ನಮ್ಮ ಕೆ.ಇ.ಬಿ. ಸಬ್‌ಡಿವಿಜನ್‌ಗೆ ಕೊಟ್ಟರೆ ನಾವು ರೆಗ್ಯೂಲರೈಸ್ ಮಾಡುತ್ತೇವೆ.

ಅಧ್ಯಕ್ಷರು : ಶಿವರಾಮು ಒಂದು ಕೆಲಸ ಮಾಡಿ ಪ್ರಶ್ನೋತ್ತರ ಆದಮೇಲೆ ನಾವು ದರ್ಶನಪುರವರು ಕುಳಿತುಕೊಂಡು ಡಿಸ್‌ಕಸ್ ಮಾಡಿ. I would appeal to all the Hon'ble Members. ಈ ಸದನದ ಗೌರವ, ಗಾಂಭೀರ್ಯ ಯಾವಾಗ ಜಾಸ್ತಿಯಾಗುತ್ತದೆ ಎಂದರೆ ಪ್ರಶ್ನೋತ್ತರ ಸಮಯವನ್ನು ಪ್ರಶ್ನೋತ್ತರ ವೇಳೆಯಲ್ಲಿ ಮುಗಿಸಿದಾಗ ಮಾತ್ರ ಆದರೆ ಈ ಇನ್ನೂ 3 ಪ್ರಶ್ನೆಗಳು ಬಾಕಿ ಇವೆ, ಈಗಾಗಲೇ ಪ್ರಶ್ನೋತ್ತರದ ಸಮಯ ಮುಗಿದು 3 ನಿಮಿಷವಾಯಿತು ಈ ಸಮಯ ಮುಗಿದರೂ ಇನ್ನೂ ಪ್ರಶ್ನೆಗಳುಮುಗಿಯದಿದ್ದರೆ ನನಗಾಗಲಿ, ಈ ಸದನಕ್ಕೆ ಆಗಲಿ ಅಗೌರವಾಗುತ್ತದೆ. ಆದ್ದರಿಂದ ನಾವು ಪ್ರಶ್ನೋತ್ತರ ಪೂರ್ಣ ಮಾಡದೇ

ಟೈಮ್ ಕೂಡ ಇದು ಹಾಗೆ ಮಾಡದೆ ಹೋದರೆ ಸರಿ ಆಗುವುದಿಲ್ಲ. ತಾವುಎಲ್ಲರೂ ದಯಮಾಡಿ ಅರ್ಥಮಾಡಿ ಕೊಳ್ಳಿ ಎಲ್ಲಾ ಪ್ರಶ್ನೆಯಲ್ಲಿ ಎಲ್ಲರೂ ಉಪ ಪ್ರಶ್ನೆ ಹೇಳುತ್ತಾರೆ ಎಲ್ಲರೂ ಎದ್ದು ನಿಲ್ಲುತ್ತಾರೆ ನಾನು ಯಾರಿಗೂ ಬೇಡ ಎಂದು ಹೇಳುವುದಿಲ್ಲ ದಯಮಾಡಿ ಸಹಕರಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದರಲ್ಲಿ ಎರಡೂ ಮಾತಿಲ್ಲ ತಮಗೆ ಗೊತ್ತಿದೆ ನಾವು ನಾಲ್ಕುತಿಂಗಳ ನಂತರ ಸಭೆ ಸೇರಿದ್ದೇವೆ, ಇಷ್ಟುಗಂಭೀರವಾದ ವಿಷಯವಿದೆ. ಒಂದು ಸಂಗತಿ,ತಮಗೆ ತಿಳಿಸುವುದೇನೆಂದರೆ ತಮ್ಮ ಕೊಠಡಿಗೆ ಬಂದು ಗರಿಷ್ಠ ದಂಡ ಕಾನೂನು ಬಾಹಿರ ಕನ್‌ಕ್ಷನ್ ತೆಗೆದುಕೊಂಡರೆ 5 ಸಾವಿರ ಎರಡು ಹೇಳಿದರು ನಾವು ಒಪ್ಪಿಗೊಂಡು ಬಂದೆವು. ಈಗ 13 ಸಾವಿರ ವಸೂಲು ಮಾಡುತ್ತಿದ್ದಾರೆ ಇವರಿಗೆ ಏನು ಮಾಡಬೇಕು ಹೇಳಿರಿ? ಜನಕ್ಕೆ ನಾವು ಏನು ಉತ್ತರ ಕೊಡಬೇಕು

ಅಧ್ಯಕ್ಷರು : ಈಗ ನಾನು ಏನು ಹೇಳುತ್ತೇನೆಂದರೆ ನಿಲುವಳಿ ಸೂಚನೆ ಇದೇ ವಿಚಾರದಲ್ಲಿ ಬರುವುದರಿಂದ ರಿಮೇನಿಂಗ್ ಥಿಂಗ್ಸ್ ನೀವು ಏನು ಹೇಳುವುದು ಇದೆ ಆ ಸಮಯದಲ್ಲಿ ಉಪಯೋಗಿಸಿಕೊಳ್ಳಿ ದಯವಿಟ್ಟು ತಾವು ಎಲ್ಲರೂ ನನ್ನ ಜೊತೆಗೆ ಸಹಕರಿಸಿ.

ಶ್ರೀ ಬಿ. ಶಿವರಾಮು : ಮುಖ್ಯಮಂತ್ರಿಗಳು ಇದ್ದಾರೆ ನಾನು ಏಕೆ ಹೇಳುತ್ತೇನೆಂದರೆ ಕ್ಯಾಟಗರಿ 2-3ರಲ್ಲಿ 8 ಸಾವಿರ 13 ಸಾವಿರ ರೈತರಿಗೆ ಆಗುತ್ತದೆ. ಸರ್ವೀಸ್‌ಮೇನ್‌ಗೂ 13 ಸಾವಿರ ಆಗುತ್ತದೆ, ಅವನು ಕಂಬ ಹಾಕಿ 20 ಸಾವಿರ ಕರ್ಚು ಮಾಡಿಕೊಂಡವವನಿಗೆ 13 ಸಾವಿರ ಎರಡೂವರೆ ಸಾವಿರ. ಕ್ಯಾಟಗರಿ 4ರಲ್ಲಿ ತಂದು ಬಿಡಲಿ ಈಗಲೇರೈತರ ಕೈಯಿಂದ ದುಡಟು ಕಟ್ಟಿಸುತ್ತೇವೆ.

ಅಧ್ಯಕ್ಷರು : ಅವರು ಎಷ್ಟು ಸಾವಿರವಾದರೂ ತೆಗೆದುಕೊಳ್ಳಲಿ ನಿಮ್ಮ ಊರಿಗೆ ಕರೆಂಟ್ ಆದರೂ ಕೊಟ್ಟಿದ್ದಾರೆ ನಮ್ಮ ಊರಿಗೆ ಕರೆಂಟ್ ಬಂದು 11 ದಿವಸವಾಗಿದೆ.

ಶ್ರೀ ಬಿ. ಶಿವರಾಮು : ನಿಮಗೆ ಪವರ್ ಸ್ಟೇಷನ್ಸ್ ಮೂಲಭೂತ ಸೌಕರ್ಯಗಳು ಕೋಲಾರ ಜಿಲ್ಲೆಗೆ ಜಾಸ್ತಿಯಾಗಿದೆ. ಈಗ ಹಾಸನಕ್ಕೆ ಕಣ್ಣು ಬಿದ್ದಿದೆ. ಇದರಿಂದಾಗಿ ತೊದರೆಯಾಗಿದೆ. ಬಹುಶಃ ಶ್ರೀ ಬೈರೇಗೌಡರಿಗೆ ಈ ವಿಚಾರ ಅರ್ಥವಾಗಿದೆ ಏಕೆಂದರೆ ಅವರ ಮೇಲೆ ರೈತರು ಸಾಕಷ್ಟು ಗಲಾಟೆ ಮಾಡಿದ್ದಾರೆ. ಇದು ತೀಕ್ಷಣವಾದ ವಿಚಾರವಾಗಿರುವುದರಿಂದ ಗಹನವಾದ ವಿಚಾರವಾಗಿರುವುದರಿಂದ ತಾವು ಸ್ವಲ್ಪ ಗಮನಹರಿಸಬೇಕು. ಕ್ಯಾಟಗರಿ 2-3ನ್ನು ಬದಲಾಯಿಸಿ 4 ಕ್ಕೆ ಕೊಡಿಸಿ ರೈತರು ಎರಡುವರೆ

ಸಾವಿರ ಕೊಡಲಿಕ್ಕೆ ತಯಾರಿದ್ದಾರೆ ಎರಡೂವರೆ ಮತ್ತೆ ದಂಡ ಎರಡೂವರೆ ಸೇರಿ 5 ಸಾವಿರ ಆಗುತ್ತದೆ. ಅದು 13 ಸಾವಿರ 8 ಸಾವಿರ ಅಲ್ಲ ಇದು.

ಅಧ್ಯಕ್ಷರು : ಸಾಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹಾಜರಿದ್ದಾರೆ, ನಿಲುವಳಿಸೂಚನೆಯನ್ನು ಈಗ ತೆಗೆದುಕೊಳ್ಳುತ್ತಿದ್ದೇವೆ. ನೀವು ಪ್ರಾಸ್ತಾವಿಕ ಮಂಡನೆ ಮಾಡುವಾಗ ತಮ್ಮ ಮುಖಂಡರು ಎಲ್ಲ ಸೇರಿ ಔಪಚಾರಿಕವಾಗಿ

(ಗೊಂದಲ)

ಶ್ರೀ ಬಿ. ಶಿವರಾಮು : ಈಗ ಆ ವಿಚಾರ ಬರುತ್ತಾ ಇಲ್ಲಾ ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಿಲುವಳಿ ಸೂಚನೆ ಏನು ಬರುತ್ತದೆ ಅದರಲ್ಲಿ ಫಸ್ಟ್ ಜುಲೈನಿಂದ ಮಾಡಿದಂಥ ಅನ್ಹಾನ್ಸಮೆಂಟ್ ಅದರ ಬಗ್ಗೆ ಬರುತ್ತದೆ, ಅದು ಏನು ಅಂದರೆಹಿಂದೆ ಇದೇ ಸದನದಲ್ಲಿ ನಾವು ಅವರೆಲ್ಲರೂ ಸೇರಿ ಒಂದು ಒಪ್ಪಂದಕ್ಕೆ ತಮ್ಮ ಕೊಠಡಿಯಲ್ಲಿ ಏನು ಬಂದಿದ್ದೆವು ಅದರ ಆಧಾರದ ಮೇಲೆ ರೆಗ್ಯುಲರೈಸ್‌ಮಾಡತಕ್ಕಂಥ ಪ್ರಶ್ನೆಯನ್ನು ಕೇಳುತ್ತಾ ಇದ್ದೇವೆ. ಅವರು ಕೇಳುವುದು ಏನೆಂದರೆ ಕ್ಯಾಟಗರಿ 4 ರಲ್ಲಿಇರತಕ್ಕಂಥ 2500 ರೂಪಾಯಿ ಏನು ಇದೆಅದನ್ನು ಈ ರೈತರಿಗೆ ಅನುಕೂಲ ಮಾಡಿ ಕೊಡಿ, ಏಕೆಂದರೆ ಅವರೇ ಕಂಬ ಹಾಕಿಕೊಂಡು ವಿದ್ಯುತ್ ವೈರ್ ಹಾಕಿಕೊಂಡು ಎಲ್ಲವನ್ನು ಅವರೇ ಮಾಡಿ ಕೊಂಡಿದ್ದಾರೆ. ಜಸ್ಟ್ ಕನೆಕ್ಷನ್ ಕೊಡತಕ್ಕಂಥದ್ದು ಇದಕ್ಕೆ ದಯವಿಟ್ಟು ಎರಡೂವರೆ ಸಾವಿರ ಎರಡೂವರೆ ಸಾವಿರ ದಂಡ ಅಂದರೆ ಒಟ್ಟು 5 ಸಾವಿರ ಆಗುತ್ತದೆ ಅದಕ್ಕಾಗಿ 5000-00 ರೂಪಾಯಿ ತೆಗೆದುಕೊಂಡು 18 ಸಾವಿರ ಪಂಪ್‌ಸೆಟ್ಟುಗಳು ಏನು ಇವೆ ಅವೆಲ್ಲದಕ್ಕೂ ರೆಗ್ಯೂಲರೈಸ್‌ಮಾಡಿಕೊಡಿ ಎಂದು ಕೇಳುತ್ತಾರೆ. ಇದರಲ್ಲಿ ಇಡೀ ರಾಜ್ಯದ್ದು ಇವೆ ಬರೀ ಅವರ ಕ್ಷೇತ್ರದಲ್ಲಿ ಮಾತ್ರ ಸಂಬಂಧಪಡುವುದಿಲ್ಲ.

ಶ್ರೀ ಸಿ. ಎನ್. ಪುಟ್ಟೇಗೌಡ : ಅನಧಿಕೃತ ಬಾವಿಗಳನ್ನು ರೆಗ್ಯೂಲರೈಸ್ ಮಾಡುವುದರಲ್ಲಿ ಏನು ಸಮಸ್ಯೆ ತಂದಿದ್ದಾರೆ ಇದರ ವಿಚಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಬೇರೆ ಬೇರೆ ತರಹ ಸಮಸ್ಯೆ ಇವೆ. ನಮ್ಮ ತಾಲ್ಲೂಕಿನ ಕೆನಾಲ್ ಟನಲ್‌ಮಧ್ಯೆಹರಿದು ಹೋಗಿದೆ. ಮಂಡ್ಯ ಮತ್ತು ತುಮಕೂರಿಗೆ ನೀರು ಕೊಡುವಂಥ ಮಹತ್ಕಾರ್ಯ ಮಾಡಿ ಇಡೀ ತಾಲ್ಲೂಕು ಬರಡಾಗಿದೆ, ಕುಡಿಯುವ ನೀರು ಇಲ್ಲದೆ ತೆಂಗಿನ ಕಾಯಿಯ ಗಾತ್ರ ಕೂಡ ಕಡಿಮೆಯಾಗಿದೆ. ಇವತ್ತು ಏನಾಗಿದೆ ಚಿನ್ನರಾಯಪಟ್ಟಣವನ್ನು ಬ್ಲಾಕ್ ಏರಿಯಾ ಎಂದು ಮಾಡಿದ್ದಾರೆ. ಈಗ ಅನಧಿಕೃತ ಬಾವಿಗೆ ದುಡ್ಡು ಕಟ್ಟಿಸಿಕೊಳ್ಳುತ್ತಾ ಇಲ್ಲ. ದಯಮಾಡಿ ಈ ವಿಚಾರದಲ್ಲಿ ಸ್ವಲ್ಪ ಸಡಿಲಗೊಳಿಸಿ, ಯಾರೋ ಅಬಕಾರಿ ಕಂಟ್ರಾಕ್ಟರ್‌ದಾರರು ದುಡ್ಡು ಕಟ್ಟದಿದ್ದರೆ ನಾವು

ತಡೆದುಕೊಳ್ಳುತ್ತೀರಿ. ಆದ್ದರಿಂದ ಬಡ ರೈತ ಕಟ್ಟುವುದಕ್ಕೆ ಸ್ವಲ್ಪ ಸಮಯ ಕೊಡಬೇಕು, ದಯಮಾಡಿ ರೀಲ್ಯಾಷನ್ ಮಾಡಬೇಕು, ವಿಶೇಷವಾಗಿ ಗಮನಹರಿಸಬೇಕು, ಏಕೆಂದರೆ ಈ ಟನಲ್ ಅನ್ನು ತೊಡಿರುವುದರಿಂದ ಚನ್ನರಾಯಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ತೊಂದರೆಯಾಗಿದೆ ಎನ್ನುವುದು ನನ್ನ ಅಭಿಪ್ರಾಯ ಇದರ ಕಡವಳಿ ಸರ್ಕಾರ ವಿಶೇಷ ಗಮನ ಕೊಡಬೇಕು.

ಅಧ್ಯಕ್ಷರು : ಒಳ್ಳೆಯ ಸಲಹೆ, ಒಂದು ನಿಮಿಷ ನೀವು ಹೇಳುತ್ತಾ ಇದ್ದರೆ ಅವರು ಉತ್ತರ ಕೊಡುವುದು ಬೇಡವೇ?

ಶ್ರೀ ಬಿ. ಶಿವರಾಮು : ಮಾನ್ಯ ಮುಖ್ಯಮಂತ್ರಿಗಳು ಸಮಯ ವಿಸ್ತರಿಸಿ ಕ್ಯಾಟಗರಿ 4ರ ಒರಗೆ ಕೊಡುತ್ತೇವೆಂದು ಒಂದು ಮಾತು ಹೇಳಿದರೆ ರಾಜ್ಯದ ರೈತರಿಗೆ ಅನುಕೂಲವಾಗುತ್ತದೆ, ಬಹಳ ಪ್ರಮುಖವಾಗಿರುವ ವಿಷಯ 18 ಸಾವಿರ ರೈತರು ಇವತ್ತು ಕನಿಷ್ಟ ಎರಡು ಎಕರೆ ಮಾಡಿಕೊಂಡರೆ 36 ಸಾವಿರ ಎಕರೆ ನೀರಾವರಿ ಆಗುತ್ತದೆ.

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ, ಸಮಯ ವಿಸ್ತರಿಸಿ ಈ ಕ್ಯಾಟಗರಿ ಬದಲಾವಣೆ ಮಾಡಿ ಅದಕ್ಕೆ ಕಡಿಮೆ ಬೀಳುವ ರೀತಿಯಲ್ಲಿ ಮಾಡಬೇಕೆಂದು ಕೇಳುತ್ತಾರೆ. Your Minister is not in position to answer.

ತಾವು ಇದಕ್ಕೆ ಏನಾದರೂ ಉತ್ತರ ಹೇಳುತ್ತೀರೋ ? ಅದೇ ಅನಧಿಕೃತ ಕನೆಕ್ಷನ್‌ನನ್ನು ಸಕ್ರಮಗೊಳಿಸುವ ಬಗ್ಗೆ They are demanding

ಶ್ರೀ ಜೆ. ಹೆಚ್. ಪಟೇಲ್ : ಆಗಬಹುದು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಶಿವರಾಮು : ಒಂದು ಮನವಿ ಸಾರ್.

ಅಧ್ಯಕ್ಷರು : ಮತ್ತೆ ಎಂಥ ಮನವಿ ನೀವು ಹಿರಿಯ ಸದಸ್ಯರಿದ್ದೀರಿ ಪ್ರಶ್ನೋತ್ತರದಲ್ಲಿ ಮತ್ತೆ ಎಂಥ ಮನವಿ?

ಶ್ರೀ ಬಿ. ಶಿವರಾಮು : ಹೋದ ಸಲ ಏನಾಯಿತು ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ನಾವು ಸೇರಿಕೊಂಡು ಚರ್ಚೆ ಮಾಡಿದೆವು ಆಗ ಬೇರೇ ಇಲಾಖಾಧಿಕಾರಿಗಳು ಸೇರಿಕೊಂಡು ಮಧ್ಯಪ್ರದೇಶ ಮಾಡಿರುವುದರಿಂದ ಜಾಸ್ತಿ ಆಯಿತು. ಇಲ್ಲದಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಾ ಇರಲಿಲ್ಲ. ಹೆಚ್ಚು ಅಧಿಕಾರಿಗಳು ಇಂಟರ್‌ಫಿಯರ್ ಆಗುತ್ತಾರೆ. ಇಲ್ಲಿ ರಾಜಕಾರಣಿಗಳಿಗೆ ಏನು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬಿಡದೆ ಅನ್ಯಾಯವಾಗಿದೆ ಇಲ್ಲದೇ ಇದ್ದರೆ ಇಷ್ಟು ಹೊತ್ತಿಗೆಇದು ಮುಗಿದು ಹೋಗುತ್ತಿತ್ತು.

ಅಧ್ಯಕ್ಷರು : ಈಗ ನನಗೆ ನೀವು ಮಾರ್ಗದರ್ಶನ ಕೊಡಬೇಕು ಪ್ರಶ್ನೋತ್ತರ ಮುಗಿದು ಮೂರು ನಿಮಿಷವಾಯಿತು ಇನ್ನೂ 4 ಪ್ರಶ್ನೆಗಳು ಬಾಕಿ ಉಳಿದಿವೆಈ ನಾಲ್ಕು ಪ್ರಶ್ನೆಗಳನ್ನು ಬಿಯಾಂಡ್ ಕ್ವೋಶ್ಚನ್ ಅವರೆ ತೆಗೆದುಕೊಳ್ಳಬೇಕೆ? ಅಥವಾ ಈ ಇಲಾಖೆಯ ಪ್ರಶ್ನೆಗಳು ಇನ್ನೊಂದು ದಿವಸ ಬಂದಾಗ ಆ ದಿವಸಕ್ಕೆ ಈ ಪ್ರಶ್ನೆಗಳನ್ನು ಪೋಸ್ಟ್ ಮಾಡಿಕೊಳ್ಳೋಣವೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹತ್ತು ನಿಮಿಷದಲ್ಲಿ ಎಲ್ಲಾ ಮುಗಿಸಿ

Mr. Speaker : unless all the members cooperate.

ಇದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಕಡೆ ಬರುತ್ತದೆ, ಸಾರ್ವಜನಿಕ ಮಹತ್ವದ ಸಮಸ್ಯೆಯಾಗಿದೆ, ಹಾಗೂ ನಾವು 4 ತಿಂಗಳಿಗೆ ಸಭೆ ಸೇರಿರುವುದರಿಂದ ಹೀಗಾಗಿದೆ 3 ತಿಂಗಳಿಗೆ ಒಮ್ಮೆ ಸೇರಿದರೆ ಈ ಪ್ರಶ್ನೆಬರುವುದಿಲ್ಲ.

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಜಾಗೃತ ದಳ ಪತ್ತೆ ಮಾಡಿರುವ ಪ್ರಕರಣಗಳು

252 (2203)-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1996-97ನೇ ಸಾಲಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಜಾಗೃತದಳ ಒಟ್ಟು ಎಷ್ಟು ವಿದ್ಯುತ್ ಕಳವು ಪ್ರಕರಣಗಳನ್ನು ಹಾಗೂ ವಿದ್ಯುತ್ ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿದೆ? (ಪ್ರತಿ ತಿಂಗಳಿನ ಪ್ರತ್ಯೇಕ ವಿವರ ಕೊಡುವುದು)

ಆ) ಇದರ ದಂಡವಾಗಿ ಮಂಡಳಿಯು ಎಷ್ಟು ಹಣವನ್ನು ಸಂಗ್ರಹ ಮಾಡಿದೆ?

ಇ) ಜಾಗೃತ ದಳವು ಇದುವರೆಗೂ ಎಷ್ಟು ಕಂಪೆನಿಗಳ ಮೇಲೆದಾಳಿ ಮಾಡಿದೆ, ಹಾಗೂ ಇದರ ಮೇಲೆ ತೆಗೆದುಕೊಂಡಿರುವ ಕ್ರಮಗಳ ವಿವರ ನೀಡುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) 1996-97ನೇ ಸಾಲಿನಲ್ಲಿ ಏಪ್ರಿಲ್ 1996ರಿಂದ ಮಾರ್ಚ್ 97ರ ವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಜಾಗೃತದಳದವರು ಒಟ್ಟು 168 ವಿದ್ಯುತ್ ಕಳುವು ಪ್ರಕರಣಗಳನ್ನು ಹಾಗೂ